**All India Radio: Bangalore**
**National Bulletin In Kannada**
**21.05.2026 07.35 a.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**21.05.2026 07.35 a.m.**
**<><><><>**

ಮುಖ್ಯಾಂಶಗಳು

1. ಪಂಚ ರಾಷ್ಟ್ರಗಳ ಯಶಸ್ವಿ ಪ್ರವಾಸ ಪೂರ್ಣಗೊಳಿಸಿ ದೆಹಲಿಗೆ ಹಿಂತಿರುಗಿದ ಪ್ರಧಾನಿ ನರೇಂದ್ರ ಮೋದಿ
2. ೨೦೨೭ ಅನ್ನು ಸಂಸ್ಕೃತಿ ಮತ್ತು ಪ್ರವಾಸೋದ್ಯಮ ವರ್ಷವೆಂದು ಆಚರಿಸಲು ಭಾರತ-ಇಟಲಿ ನಿರ್ಧಾರ
3. ಮುಂಬರುವ ನೀಟ್ ಮರುಪರೀಕ್ಷೆಯ ಸುರಕ್ಷತೆ ಖಾತ್ರಿಗೆ ಹೆಚ್ಚಿನ ಜಾಗರೂಕತೆ ಮತ್ತು ಭದ್ರತಾ ವ್ಯವಸ್ಥೆಗೆ ಕ್ರಮ - ಸಚಿವ ಧರ್ಮೇಂದ್ರ ಪ್ರಧಾನ್
4. ದೇಶಾದ್ಯಂತ ಇಂದು ಭಯೋತ್ಪಾದನಾ ನಿಗ್ರಹ ದಿನ ಆಚರಣೆ
5. ಐಪಿಎಲ್ ಟಿ-೨೦ ಕ್ರಿಕೆಟ್ : ಪ್ಲೇಆಫ್ ನಿರೀಕ್ಷೆ ಜೀವಂತವಾಗಿರಿಸಿಕೊಂಡ ಕೋಲ್ಕತ್ತಾ ನೈಟ್ ರೈಡರ್ಸ್

<><><><>

ಪಂಚ ರಾಷ್ಟ್ರಗಳ ಪ್ರವಾಸದ ಅಂತಿಮ ಚರಣದಲ್ಲಿ ಇಟಲಿ ಭೇಟಿಯನ್ನು ಯಶಸ್ವಿಯಾಗಿ ಮುಗಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, ಕಳೆದ ರಾತ್ರಿ ನವದೆಹಲಿಗೆ ಹಿಂತಿರುಗಿದ್ದಾರೆ. ಭಾರತ ಮತ್ತು ಇಟಲಿ ನಿನ್ನೆ ತಮ್ಮ ಸಂಬಂಧಗಳನ್ನು ವಿಶೇಷ ಕಾರ್ಯತಂತ್ರದ ಪಾಲುದಾರಿಕೆಯಾಗಿ ಮೇಲ್ದರ್ಜೆಗೇರಿಸುವುದಾಗಿ ಘೋಷಿಸಿದ್ದು, ಇದು ದ್ವಿಪಕ್ಷೀಯ ಸಂಬಂಧಗಳಲ್ಲಿ ಒಂದು ಪ್ರಮುಖ ಹೆಜ್ಜೆಯಾಗಿದೆ. ಕೃಷಿ, ನಿರ್ಣಾಯಕ ಖನಿಜಗಳು, ಆಯುರ್ವೇದ, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಭಾರತದಿಂದ ಇಟಲಿಗೆ ನರ್ಸ್‌ಗಳ ಸಂಚಾರಕ್ಕೆ ಅನುಕೂಲ ಕಲ್ಪಿಸುವುದು ಸೇರಿದಂತೆ ಹಲವು ವಲಯಗಳಲ್ಲಿ ಎರಡೂ ದೇಶಗಳು ಕೆಲವು ಒಪ್ಪಂದಗಳಿಗೆ ಸಹಿ ಹಾಕಿದವು. ತೆರಿಗೆ ಅಪರಾಧಗಳು, ಹಣ ವರ್ಗಾವಣೆ ಮತ್ತು ಭಯೋತ್ಪಾದನಾ ಹಣಕಾಸು ನಿಗ್ರಹಕ್ಕಾಗಿ ಎರಡೂ ರಾಷ್ಟ್ರಗಳು ಒಡಂಬಡಿಕೆಗಳಿಗೆ ಸಹಿ ಹಾಕಿದವು. ರೋಮ್‌ನಲ್ಲಿ ತಮ್ಮ ಇಟಲಿಯ ಸಹವರ್ತಿ ಜಾರ್ಜಿಯಾ ಮೆಲೋನಿ ಅವರೊಂದಿಗೆ ಜಂಟಿ ಪತ್ರಿಕಾಗೋಷ್ಠಿ ನಡೆಸಿದ ಪ್ರಧಾನಿ ನರೇಂದ್ರ ಮೋದಿ, ಇಟಲಿ ವಿನ್ಯಾಸ ಮತ್ತು ನಿಖರತೆಗೆ ವಿಶ್ವಾದ್ಯಂತ ಹೆಸರುವಾಸಿಯಾಗಿದೆ ಮತ್ತು ಭಾರತ ಪ್ರತಿಭೆ ಮತ್ತು ನಾವೀನ್ಯತೆಯ ಶಕ್ತಿಕೇಂದ್ರವಾಗಿದೆ ಎಂದು ಹೇಳಿದರು. ಭಾರತ ಮತ್ತು ಇಟಲಿ ವಿನ್ಯಾಸ ಮತ್ತು ಅಭಿವೃದ್ಧಿಗೊಳಿಸಿ, ಅದನ್ನು ವಿಶ್ವಕ್ಕಾಗಿ ತಲುಪಿಸುವ ತತ್ವದ ಮೇಲೆ ಮುಂದುವರಿಯುತ್ತವೆ. ರಕ್ಷಣೆ ಕೈಗಾರಿಕಾ ಮಾರ್ಗಸೂಚಿಯು ಸಹ-ಅಭಿವೃದ್ಧಿ ಮತ್ತು ಸಹ-ಉತ್ಪಾದನೆಗೆ ದಾರಿ ಮಾಡಿಕೊಟ್ಟಿದೆ ಎಂದು ಪ್ರಧಾನಿ ಹೇಳಿದರು. ಹಡಗು ಸಾಗಣೆ, ಬಂದರುಗಳ ಆಧುನೀಕರಣ, ಲಾಜಿಸ್ಟಿಕ್ಸ್ ಮತ್ತು ನೀಲಿ ಆರ್ಥಿಕತೆಯ ಮೇಲೆ ಎರಡೂ ದೇಶಗಳು ಒಗ್ಗೂಡಿ ಕಾರ್ಯನಿರ್ವಹಿಸಲಿವೆ. ಭಯೋತ್ಪಾದನೆಗೆ ಹಣಕಾಸು ಒದಗಿಸುವವರ ವಿರುದ್ಧ ಭಾರತ-ಇಟಲಿಯ ಜಂಟಿ ಉಪಕ್ರಮವು ಇಡೀ ಪ್ರಪಂಚದ ಮುಂದೆ ಒಂದು ಪ್ರಮುಖ ಉದಾಹರಣೆ ಮಂಡಿಸಿದೆ ಎಂದು ನರೇಂದ್ರ ಮೋದಿ ಹೇಳಿದರು. ಉಕ್ರೇನ್, ಪಶ್ಚಿಮ ಏಷ್ಯಾ ಮತ್ತು ಇತರ ಸಂಘರ್ಷಗಳಿಗೆ ಸಂಬಂಧಿಸಿದಂತೆ ಎರಡೂ ರಾಷ್ಟ್ರಗಳು ನಿರಂತರ ಸಂಪರ್ಕದಲ್ಲಿವೆ. ಎಲ್ಲಾ ಸಮಸ್ಯೆಗಳನ್ನು ಮಾತುಕತೆ ಮತ್ತು ರಾಜತಾಂತ್ರಿಕತೆಯ ಮೂಲಕ ಪರಿಹರಿಸಬೇಕು ಎಂಬ ಭಾರತದ ನಿಲುವು ಸ್ಪಷ್ಟವಾಗಿದೆ ಎಂದು ಪ್ರಧಾನಿಯವರು ಸ್ಪಷ್ಟಪಡಿಸಿದರು.

**ಬೈಟ್- ಪ್ರಧಾನಮಂತ್ರಿ-ರಿಲೇಷನ್ (೩೩ ಸೆಕೆಂಡ್‌ಗಳು)**

ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೋನಿ, ಎರಡೂ ದೇಶಗಳ ನಡುವೆ ನಿರ್ಣಾಯಕ ಖನಿಜಗಳು, ಕೃಷಿ-ಉದ್ಯಮ, ಕಡಲ ಸಾರಿಗೆ, ಪ್ರವಾಸೋದ್ಯಮ ಮತ್ತು ಸಂಸ್ಕೃತಿಯಲ್ಲಿ ಅಪಾರ ಅವಕಾಶಗಳಿವೆ ಎಂದು ಹೇಳಿದರು. ಇದೇ ವೇಳೆ ಇಟಲಿ ರೋಮ್‌ನ ಕೃಷಿ ಮತ್ತು ಆಹಾರ ಸಂಸ್ಥೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಪ್ರತಿಷ್ಠಿತ ವಿಶ್ವಸಂಸ್ಥೆಯ ಅಗ್ರಿಕೋಲಾ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

<><><><>

ಭಾರತ ಮತ್ತು ಇಟಲಿ ೨೦೨೭ ಅನ್ನು "ಸಂಸ್ಕೃತಿ ಮತ್ತು ಪ್ರವಾಸೋದ್ಯಮ ವರ್ಷ" ಎಂದು ಆಚರಿಸಲಿದ್ದು, ಎರಡು ಪ್ರಾಚೀನ ನಾಗರಿಕತೆಗಳ ನಡುವಿನ ಸಾಂಸ್ಕೃತಿಕ ವಿನಿಮಯವನ್ನು ಉತ್ತೇಜಿಸಲು ಮತ್ತು ಸಂವಾದವನ್ನು ಬಲಪಡಿಸಲು ಸಹಾಯ ಮಾಡುತ್ತದೆ ಎಂದು ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೋನಿ ಹೇಳಿದ್ದಾರೆ. ಉಭಯ ದೇಶಗಳ ನಡುವಿನ ಬಲವಾದ ಸಂಬಂಧಗಳನ್ನು ರಾಜಕೀಯ ಮತ್ತು ಆರ್ಥಿಕ ಸಂಬಂಧಗಳ ಮೂಲಕ ಮಾತ್ರವಲ್ಲದೆ ಜನರು ಮತ್ತು ಸಮಾಜಗಳ ನಡುವಿನ ಸಂಪರ್ಕಗಳ ಮೂಲಕವೂ

ಅಳೆಯಲಾಗುತ್ತದೆ ಎಂದು ಅವರು ತಿಳಿಸಿದರು. ನಿನ್ನೆ ರೋಮ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಜಂಟಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಮೆಲೋನಿ, ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಕಾರಿಡಾರ್ ಅನ್ನು ಮತ್ತಷ್ಟು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಭಾರತ ಮತ್ತು ಇಟಲಿ ಕಾರ್ಯನಿರ್ವಹಿಸಲಿವೆ ಎಂದು ಹೇಳಿದರು. ವ್ಯಾಪಾರ, ಹೂಡಿಕೆ ಮತ್ತು ಪೂರೈಕೆ-ಸರಣಿ ಸ್ಥಿತಿಸ್ಥಾಪಕತ್ವವನ್ನು ಬಲಪಡಿಸುವ ಸಾಮರ್ಥ್ಯದೊಂದಿಗೆ ಯುರೋಪ್, ಮಧ್ಯಪ್ರಾಚ್ಯ ಮತ್ತು ಭಾರತವನ್ನು ಸಂಪರ್ಕಿಸುವ ಪ್ರಮುಖ ಸಂಪರ್ಕ ಮತ್ತು ಆರ್ಥಿಕ ಕಾರಿಡಾರ್ ಎಂದು ಮೆಲೋನಿ ವಿವರಿಸಿದರು.

<><><>

ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರತಿಷ್ಠಿತ ಅಗ್ರಿಕೋಲಾ ಪದಕವನ್ನು ಪಡೆದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅಭಿನಂದಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು, ಈ ಗೌರವ ಲಕ್ಷಾಂತರ ಭಾರತೀಯ ರೈತರು ಮತ್ತು ಕೃಷಿ ವಲಯಕ್ಕೆ ಸಂಬಂಧಿಸಿದ ಎಲ್ಲರಿಗೂ ಸಂದ ಗೌರವವಾಗಿದೆ. ಕೃಷಿ ಸುಧಾರಣೆಗಳು, ಆಹಾರ ಭದ್ರತೆ ಮತ್ತು ರೈತರ ಕಲ್ಯಾಣದ ಬಗ್ಗೆ ಪ್ರಧಾನಿ ಅವರ ಬದ್ಧತೆಗೆ ಜಾಗತಿಕ ಮನ್ನಣೆಯನ್ನು ಈ ಪ್ರಶಸ್ತಿ ಪ್ರತಿಬಿಂಬಿಸುತ್ತದೆ ಎಂದು ಹೇಳಿದ್ದಾರೆ.

<><><>

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ನಿನ್ನೆ ಮೆಟಾ, ಗೂಗಲ್ ಮತ್ತು ಟೆಲಿಗ್ರಾಮ್ ಸೇರಿದಂತೆ ಪ್ರಮುಖ ಸಾಮಾಜಿಕ ಮಾಧ್ಯಮ ವೇದಿಕೆಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದರು. ಈ ವೇಳೆ ಅವರು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ತಪ್ಪು ಮಾಹಿತಿ ಹರಡುವಿಕೆ, ವಿಶೇಷವಾಗಿ ಟೆಲಿಗ್ರಾಮ್ ಚಾನೆಲ್‌ಗಳು ಮತ್ತು ಅನಾಮಧೇಯ ಆನ್‌ಲೈನ್ ಗುಂಪುಗಳ ಬಗ್ಗೆ ಗಂಭೀರ ಕಳವಳ ವ್ಯಕ್ತಪಡಿಸಿದ್ದಾರೆ. ಜೂನ್ ೨೧ ರಂದು ನಡೆಯಲಿರುವ ನೀಟ್ (ಯುಜಿ)- ೨೦೨೬ ರ ಮರುಪರೀಕ್ಷೆಗೆ ಮುಂಚಿತವಾಗಿ, ಈ ಸಭೆ ನಿರ್ಣಾಯಕವಾಗಿತ್ತು. ಇಂತಹ ಹಲವು ಲಿಂಕ್‌ಗಳು ಬಳಕೆದಾರರನ್ನು ಸ್ವಯಂಚಾಲಿತ ಬಾಟ್‌ಗಳು ಮತ್ತು ತಪ್ಪು ಮಾಹಿತಿಯನ್ನು ವರ್ಧಿಸಲು ವಿನ್ಯಾಸಗೊಳಿಸಲಾದ, ನಕಲಿ ಗುಂಪುಗಳಿಗೆ ಮರುನಿರ್ದೇಶಿಸುತ್ತವೆ ಎಂದು ಹೇಳಲಾಗಿದೆ. ಮತ್ತೊಂದು ಸಭೆಯಲ್ಲಿ, ಮುಂಬರುವ ನೀಟ್-ಯುಜಿ ಮರುಪರೀಕ್ಷೆಯ ಸುರಕ್ಷಿತ, ಮತ್ತು ನ್ಯಾಯಯುತ ನಡವಳಿಕೆಯನ್ನು ಖಚಿತಪಡಿಸಿಕೊಳ್ಳಲು, ಹೆಚ್ಚಿನ ಜಾಗರೂಕತೆ ಮತ್ತು ಭದ್ರತಾ ವ್ಯವಸ್ಥೆಗಳ ಅಗತ್ಯವನ್ನು ಶಿಕ್ಷಣ ಸಚಿವರು ಒತ್ತಿ ಹೇಳಿದರು. ನವದೆಹಲಿಯಲ್ಲಿ ನಿನ್ನೆ ಕೇಂದ್ರ ಭದ್ರತಾ ಮತ್ತು ಗುಪ್ತಚರ ಸಂಸ್ಥೆಗಳೊಂದಿಗೆ ಉನ್ನತ ಮಟ್ಟದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದ ಶಿಕ್ಷಣ ಸಚಿವರು, ಈ ವಿಷಯ ತಿಳಿಸಿದ್ದಾರೆ.

<><><>

ದೇಶಾದ್ಯಂತ ಇಂದು ಭಯೋತ್ಪಾದನಾ ನಿಗ್ರಹ ದಿನವನ್ನು ಆಚರಿಸಲಾಗುತ್ತಿದೆ. ಭಯೋತ್ಪಾದನ ಕೃತ್ಯಗಳಿಂದಾಗಿ ಸಾಮಾನ್ಯ ಜನರ ಎದುರಿಸುತ್ತಿರುವ ನೋವುಗಳನ್ನು ಎತ್ತಿ ತೋರಿಸುವುದು ಮತ್ತು ಅದು ರಾಷ್ಟ್ರೀಯ ಹಿತಾಸಕ್ತಿಗೆ ಹೇಗೆ ಹಾನಿಕರವಾಗಿದೆ ಎಂಬುದನ್ನು ತೋರಿಸುವ ಮೂಲಕ ಯುವಕರನ್ನು ಭಯೋತ್ಪಾದನೆ ಮತ್ತು ಹಿಂಸಾಚಾರದಿಂದ ದೂರವಿಡುವುದು ಈ ದಿನಾಚರಣೆಯ ಉದ್ದೇಶವಾಗಿದೆ. ಈ ದಿನವನ್ನು ಇತರ ಚಟುವಟಿಕೆಗಳ ಜೊತೆಗೆ ಭಯೋತ್ಪಾದನೆ ನಿಗ್ರಹದ ಪ್ರತಿಜ್ಞೆ ಸ್ವೀಕಾರ ಸಮಾರಂಭದ ಮೂಲಕ ಆಚರಿಸಲಾಗುವುದು. ೧೯೯೧ರ ಇದೇ ದಿನ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಭಯೋತ್ಪಾದಕರ ಕುತಂತ್ರಕ್ಕೆ ಬಲಿಯಾಗಿದ್ದರು. ಹಾಗಾಗಿ ಪ್ರತಿವರ್ಷ ಈ ದಿನವನ್ನು ಭಯೋತ್ಪಾದನಾ ನಿಗ್ರಹ ದಿನವನ್ನಾಗಿ ಆಚರಿಸಲಾಗುತ್ತಿದೆ.

<><><>

ಪಶ್ಚಿಮ ಬಂಗಾಳದ ದಕ್ಷಿಣ ೨೪ ಪರಗಣ ಜಿಲ್ಲೆಯ ಫಲ್ಟಾ ವಿಧಾನಸಭಾ ಕ್ಷೇತ್ರದಲ್ಲಿ ಇಂದು ಮರು ಮತದಾನ ನಡೆಯುತ್ತಿದೆ. ಮತದಾನ ಬೆಳಗ್ಗೆ ೭ಕ್ಕೆ ಆರಂಭವಾಗಿದ್ದು, ಸಂಜೆ ಆರು ಗಂಟೆಯವರೆಗೆ ನಡೆಯಲಿದೆ. ಇಬ್ಬರು ಪಕ್ಷೇತರರು ಸೇರಿ ಒಟ್ಟು ಆರು ಅಭ್ಯರ್ಥಿಗಳು ಕಣದಲ್ಲಿದ್ದಾರೆ. ತೃಣಮೂಲ ಕಾಂಗ್ರೆಸ್ ಅಭ್ಯರ್ಥಿ ಜಹಂಗೀರ್ ಖಾನ್ ತಾವು ಚುನಾವಣಾ ಸ್ಪರ್ಧಾಕಣದಲ್ಲಿ ಇರುವುದಿಲ್ಲವೆಂದು ಘೋಷಿಸಿದ್ದಾರೆ. ಆದರೆ ನಾಮಪತ್ರ ವಾಪಸ್ ಪಡೆಯುವ ಅವಧಿ ಮುಕ್ತಾಯಗೊಂಡಿರುವ ಕಾರಣ ಅವರ ಹೆಸರು ಮತಪತ್ರದಲ್ಲಿರಲಿದೆ. ಉಳಿದಂತೆ ಬಿಜೆಪಿಯ ದೇಬಂಗ್‌ಶು ಪಾಂಡ, ಕಾಂಗ್ರೆಸ್‌ನ ಅಬ್ದೂರ್ ರಜಾಕ್ ಮೊಲ್ಲಾ ಮತ್ತು ಸಿಪಿಐಎಂನ ಶೇಂಬುನಾಥ್ ಕುರ್ಮಿ ಸ್ಪರ್ಧಾ ಕಣದಲ್ಲಿದ್ದಾರೆ.

<><><>

ಜಾಗತಿಕವಾಗಿ ಇಂದು ಅಂತಾರಾಷ್ಟ್ರೀಯ ಚಹಾ ದಿನವನ್ನು ಆಚರಿಸಲಾಗುತ್ತಿದೆ. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ ಈ ದಿನವನ್ನು ಗುರುತಿಸಿದೆ. ಇದು ಚಹಾದ ಸಾಂಸ್ಕೃತಿಕ ಪರಂಪರೆ, ಆರೋಗ್ಯ ಪ್ರಯೋಜನಗಳು ಮತ್ತು ಆರ್ಥಿಕ ಮಹತ್ವವನ್ನು ಸಾರಲು ಒಂದು ಅವಕಾಶವಾಗಿದೆ. ಈ ವರ್ಷದ ಘೋಷವಾಕ್ಯ - "ಚಹಾವನ್ನು ಉಳಿಸಿಕೊಳ್ಳುವುದು, ಸಮುದಾಯಗಳನ್ನು ಬೆಂಬಲಿಸುವುದು ಎಂಬುದಾಗಿದೆ.

<><><>

ಮುಂಬೈ ಈಡನ್ ಗಾರ್ಡನ್ಸ್‌ನಲ್ಲಿ ನಿನ್ನೆ ರಾತ್ರಿ ನಡೆದ ಐಪಿಎಲ್ ಕ್ರಿಕೆಟ್‌ನಲ್ಲಿ, ಕೋಲ್ಕತ್ತಾ ನೈಟ್ ರೈಡರ್ಸ್ ತಂಡ, ಮುಂಬೈ ಇಂಡಿಯನ್ಸ್ ಅನ್ನು ೪ ವಿಕೆಟ್‌ಗಳಿಂದ ಸೋಲಿಸಿ, ಪ್ಲೇಆಫ್ ನಿರೀಕ್ಷೆಯನ್ನು ಜೀವಂತವಾಗಿರಿಸಿಕೊಂಡಿದೆ. ಮಳೆಯಿಂದ ಬಾಧಿತ ಪಂದ್ಯದಲ್ಲಿ, ೧೪೮ ರನ್‌ಗಳ ಗುರಿ ಬೆನ್ನಟ್ಟಿದ ಕೋಲ್ಕತ್ತಾ ನೈಟ್ ರೈಡರ್ಸ್ ತಂಡ, ೪ ವಿಕೆಟ್‌ಗಳು ಮತ್ತು ೭ ಎಸೆತಗಳು ಬಾಕಿ ಇರುವಂತೆಯೇ ಗೆಲುವಿನ ಗುರಿ ತಲುಪಿತು.

ಮನೀಶ್ ಪಾಂಡೆ ೪೫ ರನ್‌ಗಳ ಗರಿಷ್ಠ ಮೊತ್ತ ಗಳಿಸಿದರೆ, ರೋವ್‌ಮನ್ ಪೊವೆಲ್ ೪೦ ರನ್‌ಗಳ ಕೊಡುಗೆ ನೀಡಿದರು. ಮನೀಶ್ ಪಾಂಡೆ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಮುಂಬೈ ಇಂಡಿಯನ್ಸ್ ಪರ ಕಾರ್ಬಿನ್ ಬಾಷ್ ೩ ವಿಕೆಟ್ ಕಬಳಿಸಿದರು.ಇಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ, ಗುಜರಾತ್ ಟೈಟಾನ್ಸ್, ಚೆನ್ನೈ ಸೂಪರ್ ಕಿಂಗ್ಸ್ ಮುಖಾಮುಖಿಯಾಗಲಿವೆ. ಪಂದ್ಯ ಸಂಜೆ ೦೭:೩೦ ಕ್ಕೆ ಆರಂಭವಾಗಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>